StudentBounty.com

0141/C

ಐದು ವರ್ಷಗಳ ಬಿ.ಎ., ಎಲ್‌ಎಲ್.ಬಿ. (ಆನರ್ಸ್)/ಬಿ.ಬಿ.ಎ., ಎಲ್‌ಎಲ್.ಬಿ. (ಆನರ್ಸ್)

ಪ್ರಥಮ ಸೆಮಿಸ್ಟರ್ ಪರೀಕ್ಷೆ, ಡಿಸೆಂಬರ್ 2013

# ಕನ್ನಡ (KANNADA)

ಸಮಯ : 2½ ಗಂಟೆಗಳು ಗರಿಷ್ಠ ಅಂಕಗಳು : 70

**ಸೂಚನೆಗಳು :** 1. **ಭಾಷೆ** ಮತ್ತು **ಬರಹದ** ಶುದ್ಧಿಗೆ ಗಮನ ಕೊಡಲಾಗುವುದು.

2. **ಐದು** ಪ್ರಶ್ನೆಗಳಿಗೆ ಉತ್ತರಿಸಿರಿ.

3. **ಪ್ರತಿ** ಘಟಕದಲ್ಲಿ ನಿರ್ದಿಷ್ಟ ಪಡಿಸಿದ ಪ್ರಶ್ನೆಗಳನ್ನು **ಕಡ್ಡಾಯವಾಗಿ** ಉತ್ತರಿಸಿರಿ.

4. ಪ್ರಶ್ನೆ ಪತ್ರಿಕೆಯ **ಬಲಕ್ಕೆ** ಅಂಕಗಳನ್ನು ನಮೂದಿಸಲಾಗಿದೆ.

## ಘಟಕ – I

ಪ್ರಶ್ನೆ 1. (ಅ) ಕನ್ನಡ ಭಾಷೆಯು ಬೆಳೆದು-ಉಳಿದು ಬಂದಿರುವ ಬಗೆಗೆ ನಿಮ್ಮ ಅನಿಸಿಕೆಗಳನ್ನು ಸಂಗ್ರಹಿಸಿ ಬರೆಯಿರಿ. ಅಂಕಗಳು : 1×9=9

**ಅಥವಾ**

ಭಾಷೆ ಎಂದರೇನು ? ವಿವಿಧ ವಿದ್ವಾಂಸರ ವ್ಯಾಖ್ಯಾನಗಳ ಹಿನ್ನೆಲೆಯಲ್ಲಿ ವಿವರಿಸಿರಿ.

(ಬ) ಕೆಳಗಿನವುಗಳಲ್ಲಿ ಬೇಕಾದ **ಒಂದಕ್ಕೆ** ಟಿಪ್ಪಣಿ ಬರೆಯಿರಿ : ಅಂಕಗಳು : 1×5=5

1) ಭಾಷೆಯ ಅಗತ್ಯಗಳು.

2) ಅನ್ಯದೇಸಿಯ ಪದಗಳು.

## ಘಟಕ – II

ಪ್ರಶ್ನೆ 2. (ಅ) ಪತ್ರದ ವಿವಿಧಾಂಗಗಳು ಯಾವುವು ? ಮಾದರಿ ಪತ್ರ ಸಮೇತ ವಿವರಿಸಿರಿ. ಅಂಕಗಳು : 1×9=9

**ಅಥವಾ**

ವಾಕ್ಯದ ವಿವಿಧಾಂಗಗಳು ಯಾವುವು ? ಉದಾಹರಣೆಯೊಂದಿಗೆ ತಿಳಿಸಿರಿ.

P.T.O.

www.StudentBounty.com

(ಬ) ಕೆಳಗಿನ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : ಅಂಕಗಳು : 1×5=5

1) ಶಬ್ದಕೋಶದ ರಚನೆ ಕುರಿತು ಬರೆಯಿರಿ.

**ಅಥವಾ**

2) ಕೆಳಗಿನ ಕಾನೂನು ಪಾರಿಭಾಷಿಕ ಪದಗಳ ಕನ್ನಡ ಸಂವಾದಿ ಪದಗಳನ್ನು ಬರೆಯಿರಿ.

1) Absence

2) Action

3) Affidavit

4) Assistant

5) Appendix.

## ಘಟಕ – III

ಪ್ರಶ್ನೆ 3. (ಅ) ಕನ್ನಡ ಭಾಷೆಯ ವಿವಿಧ ಮಜಲುಗಳನ್ನು ಕುರಿತು ಬರೆಯಿರಿ. ಅಂಕಗಳು : 1×9=9

**ಅಥವಾ**

ಅರೆಸರಕಾರಿ ಪತ್ರವೆಂದರೇನು ? ಮಾದರಿಯೊಂದಿಗೆ ಬರೆಯಿರಿ.

(ಬ) ಕೆಳಗಿನ ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ : ಅಂಕಗಳು : 1×5=5

1) ಗಜೆಟ್ ಅಧಿಸೂಚನೆ ಕುರಿತು ಬರೆಯಿರಿ.

**ಅಥವಾ**

2) ಭಾಷೆ ಬಗೆಗೆ ಸಾಂವಿಧಾನಿಕ ನಿಯಮಗಳನ್ನು ತಿಳಿಸಿರಿ.

## ಘಟಕ – IV

ಪ್ರಶ್ನೆ 4. (ಅ) 'ಸಾಮಾಜಿಕ ರೋಗಗಳಿಗೆ ಸರ್ವಜ್ಞನ ವಚನಗಳು ಚುಚ್ಚುಮದ್ದುಗಳಂತಿವೆ'. ಚರ್ಚಿಸಿರಿ. ಅಂಕಗಳು : 1×9=9

**ಅಥವಾ**

ವಚನ ಸಾಹಿತ್ಯದಲ್ಲಿ ಮೂಡಿ ಬಂದಿರುವ ಕಾನೂನಿನ ಅಂಶಗಳನ್ನು ವಿವೇಚಿಸಿರಿ.

www.StudentBounty.com

StudentBounty.com



(ಬ) ಕೆಳಗಿನ ವಚನಗಳಲ್ಲಿ **ಒಂದರ** ಅರ್ಥ ವಿವರಿಸಿ ಬರೆಯಿರಿ: ಅಂಕಗಳು : 1×5=

''ಗಗನದ ಗುಂಪ ಚಂದ್ರಮ ಬಲ್ಲುದಲ್ಲದೆ
ಮೇಲಿದ್ದಾಡುವ ಹದ್ದು ಬಲ್ಲುದೆ ಅಯ್ಯ ?
ನದಿಯ ಗುಂಪ ತಾವರೆ ಬಲ್ಲುದಲ್ಲದೆ
ತಡಿಯಲ್ಲಿದ್ದ ಹೊನ್ನಾವರಿಕೆ ಬಲ್ಲುದೆ ಅಯ್ಯ ?
ಪುಷ್ಪದ ಪರಿಮಳ ತುಂಬಿ ಬಲ್ಲುದಲ್ಲದೆ
ಕೆರೆಯಲಿದ್ದಾಡುವ ನೊರಜ ಬಲ್ಲುದೆ ಅಯ್ಯ ?
ಚೆನ್ನಮಲ್ಲಿಕಾರ್ಜುನಯ್ಯಾ, ನಿಮ್ಮ ಶರಣರ ನಿಲವ
ನೀವೇ ಬಲ್ಲಿರಲ್ಲದೆ, ಈ ಕೋಣನ ಮೈಯ ಮೇಲಣ
ಸೊಳ್ಳೆಗಳೆತ್ತ ಬಲ್ಲವಯ್ಯ ?''

**ಅಥವಾ**

''ನುಡಿದರೆ ಮುತ್ತಿನ ಹಾರದಂತಿರಬೇಕು :
ನುಡಿದರೆ ಮಾಣಿಕ್ಯದ ದೀಪ್ತಿಯಂತಿರಬೇಕು :
ನುಡಿದರೆ ಸ್ಫಟಿಕದ ಶಲಾಕೆಯಂತಿರಬೇಕು :
ನುಡಿದರೆ ಲಿಂಗ ಮೆಚ್ಚಿ ಅಹುದೆನಬೇಕು :
ನುಡಿಯೊಳಗಾಗಿ ನಡೆಯದಿದ್ದರೆ, ಕೂಡಲಸಂಗಮನೆಂತೊಲಿವನಯ್ಯಾ ? ''

## ಘಟಕ – V

ಪ್ರಶ್ನೆ 5. (ಅ) ಕನ್ನಡ ಆಡುನುಡಿ ಮತ್ತು ಶಿಷ್ಟಪದಗಳ ಪರಿಚಯ ಮಾಡಿಕೊಡಿ. ಅಂಕಗಳು : 1×9=9

**ಅಥವಾ**

ಸ್ವರ-ವ್ಯಂಜನಗಳೆಂದರೇನು ? ಉದಾಹರಣೆಯೊಂದಿಗೆ ವಿವರಿಸಿರಿ.

(ಬ) ಕೆಳಗಿನ ಪ್ರಶ್ನೆಗಳಿಗೆ **ಒಂದೇ** ವಾಕ್ಯದಲ್ಲಿ ಉತ್ತರಿಸಿರಿ: ಅಂಕಗಳು : 1×5=5

1) 'ಕೂಡಲಸಂಗಮದೇವ' ಇದು ಯಾರ ಅಂಕಿತನಾಮ ?
2) 'ಶಬ್ದಮಣಿದರ್ಪಣ' ಬರೆದವರು ಯಾರು ?
3) 'ಕದಳಿಬನ' ಯಾರ ಐಕ್ಯದ ಸ್ಥಳವಾಗಿದೆ ?
4) ಕನಕದಾಸರ ಅಂಕಿತನಾಮ ಯಾವುದು ?
5) 'ಪುರಂದರ ವಿಠಲ' ಇದು ಯಾರ ಅಂಕಿತನಾಮ ?

www.StudentBounty.com